ಶ್ರೀ ಜೆ. ಹೆಚ್. ಯಂಕಾನಾಯ್ಕ.— ನಾನು ಮೊದಲೇ ಹೇಳಿದ ಹಾಗೆ ಹತ್ತು ಹನ್ನೊಂದು ಗ್ರಾಮದಲ್ಲಿ ಲ್ಯಾಂಡ್ ಅಕ್ವಿಜಿಷನ್ ಮಾಡಿಕೊಂಡು ಅವರಿಗೆ ಸೈಟುಗಳನ್ನು ಹಂಚಬೇಕಾಗಿದೆ. ತಾವು ಇದರ ಬಗ್ಗೆ ಯಾವಾಗ ಆದೇಶ ಕೊಡುತ್ತೀರಿ? ಅವರಿಗೆ ಯಾವಾಗ ಸೈಟುಗಳನ್ನು ಹಂಚುತ್ತೀರಿ.? ಅಲ್ಲಿ ಹರಿಜನ ಮತ್ತು ಹಿಂದುಳಿದ ವರ್ಗದವರು ಇರುವುದರಿಂದ ಅವರಿಗೆ ಇದುವರೆಗೂ ಸೈಟನ್ನು ಹಂಚಿಲ್ಲ. ಅವರಿಗೆ ಯಾವಾಗ ಸೈಟುಗಳನ್ನು ಹಂಚುತ್ತೀರಿ ಎಂದು ತಿಳಿಸುತ್ತೀರಾ?

ಶ್ರೀ ಪಿ. ಜಿ. ಆರ್. ಸಿಂಧ್ಯ.— ಆದಷ್ಟು ಬೇಗ ಅದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಮಹಮದ್ ಲೈಕಂದ್ದೀನ್.— ಅಧ್ಯಕ್ಷರೇ, ನನಗೆ ಪ್ರಶ್ನೆ ಹಾಕಲು ಅವಕಾಶ ಕೊಡಬೇಕು

ಉಪಾಧ್ಯಕ್ಷರು.— ಈಗಾಗಲೇ ಪ್ರಶ್ನೋತ್ತರ ಕಾಲಕ್ಕೆ ೨೫ ನಿಮಿಷ ಜಾಸ್ತಿಯಾಗಿದೆ. ಒಂದು ವೇಳೆ ಅವಧಿಗಿಂತ ಮುಂಚಿತವಾಗಿ ಮುಗಿದಿದ್ದರೆ ಎರಡನೇ ಸಲ ಪ್ರಶ್ನೆಗಳನ್ನು ಕೇಳಬಹುದಾಗಿತ್ತು. ಈಗ ಆಗುವುದಿಲ್ಲ

ಈಗ ಪ್ರಶ್ನೋತ್ತರ ವೇಳೆ ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ

ಕಾರ್ಮಿಕರಿಗೆ ಸರಿಯಾದ ವಸತಿ ಸೌಲಭ್ಯ ಇಲ್ಲದಿರುವ ಬಗ್ಗೆ

೬೩೧. ಶ್ರೀ ಎಂ.ಎಲ್. ಮುತ್ತಣ್ಣನವರ್ (ಗೋಕಾಕ್).— ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ಗೋಕಾಕ್ ಮಿಲ್ಲಿನಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆ ಸರಿಯಾದ ವಸತಿ ಸೌಲಭ್ಯ ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

ಆ) ಹಾಗಿದ್ದಲ್ಲಿ ಸದರಿ ಸೌಲಭ್ಯವನ್ನು ಒದಗಿಸಲು ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಡಿ. ಮಂಜುನಾಥ್ (ಕಾರ್ಮಿಕ ಮಂತ್ರಿಗಳು)—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಅಸಂಘಟಿತ ಗ್ರಾಮಾಂತರ ಕಾರ್ಮಿಕರ ರಾಜ್ಯ ಮಟ್ಟದ ಸಮಿತಿ

೫೮೬. ಶ್ರೀಮತಿ ಶಿವಕಾಂತ ಜಿ. ಚತಂರೆ (ಹುಲ್ಲೂರು).— ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ಅಸಂಘಟಿತ ಗ್ರಾಮಾಂತರ ಕಾರ್ಮಿಕರ ರಾಜ್ಯಮಟ್ಟದ ಸಮಿತಿ ಯಾವಾಗ ರಚಿತವಾಯಿತು? ಹಾಗಾದರೆ ಸದರೀ ಸಮಿತಿಯವರು ಈವರೆಗೆ ಎಷ್ಟು ಸಭೆಗಳನ್ನು ನಡೆಸಿದ್ದಾರೆ? ಮತ್ತು ಸದರೀ ಸಮಿತಿಯ ಉದ್ದೇಶಗಳೇನು?

ಆ) ಅಸಂಘಟಿತ ಗ್ರಾಮಾಂತರ ಕಾರ್ಮಿಕರ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಡಿ. ಮಂಜುನಾಥ್ (ಕಾರ್ಮಿಕ ಮಂತ್ರಿಗಳು).—

ಅ) ಸಮಿತಿಯು ದಿನಾಂಕ ೩೧-೮-೮೩ರಲ್ಲಿ ರಚಿಸಲ್ಪಟ್ಟಿತು. ಸದರೀ ಸಮಿತಿಯ ಸಭೆಯನ್ನು ಇದುವರೆಗೆ ಕರೆಯಲಾಗಿಲ್ಲ. ಕೃಷಿ ಕಾರ್ಮಿಕರು ಹಾಗೂ ಗ್ರಾಮಾಂತರ ಅಸಂಘಟಿತ ಕಾರ್ಮಿಕರ ಸಾಮಾಜಿಕ, ಆರ್ಥಿಕ, ಸ್ಥಿತಿಗತಿಗಳನ್ನು ಉತ್ತಮಪಡಿಸುವುದಕ್ಕಾಗಿ ಅವರ ಜೀವನ ಮಟ್ಟವನ್ನು ಸುಧಾರಿಸಿದವುರ ಸಲುವಾಗಿ ಸರ್ಕಾರಕ್ಕೆ ಸೂಕ್ತ ಸಲಹೆ ನೀಡುವುದಕ್ಕಾಗಿ ಹಾಗೂ ಸಂಘಟನೆಯನ್ನು ಪುರೋಭಿವೃದ್ಧಿಪಡಿಸುವುದಕ್ಕೆ ಮಾಹಿತಿ ನೀಡುವುದಕ್ಕಾಗಿ ಈ ಸಮಿತಿಯನ್ನು ರಚಿಸಬೇಕಾಗಿದೆ.

ಆ) (೧) ಕನಿಷ್ಟ ವೇತನ ಕಾಯ್ದೆಗನುಗುಣವಾಗಿ ೩೧ ಉದ್ಯಮಗಳಿಗೆ ಕನಿಷ್ಟ ವೇತನವನ್ನು ಸರ್ಕಾರ ನಿಗದಿಪಡಿಸಿದೆ.